ರೂಲಿಂಗ್ ನೀಡಿತು, ಸರ್ಕಾರದ ಪರವಾಗಿ ಎನ್ನತಕ್ಕಂಥದ್ದು ಸಹಿತ ಅವರಿಗೆ ಎಲ್ಲಾ ವಿವರವಾಗಿ ನೀಡಿದ್ದೇನೆ. ಮುಂದೆ ಇಷ್ಟರೊಳಗೆ ಅದು ತೀರ್ಮಾನವಾಗುತ್ತದೆ. ಆ ಮೇಲೆ ಕಟ್ಟಡ ಕಟ್ಟಲಿಕ್ಕೆ ನಾವು ಪ್ರಯತ್ನ ಪಡುತ್ತೇವೆ.

SRI RAJANNA: Sir it is very costly place. I request the Government through you to see that the Government takes immediate action, remove the small vendors and protect that property and see that the builiding is protected for the use of the Government.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ: ಮಾನ್ಯ ಅಧ್ಯಕ್ಷರೆ, ಅದನ್ನು ಪರಿಶೀಲನೆ ಮಾಡುತ್ತೇವೆ.

## ಬಾಡಿಗೆ ನಿಯಂತ್ರಣ ಕಾಯಿದೆ ಬಗ್ಗೆ

**114 (848)** ಶ್ರೀ ಶಿವಾನಂದ ಎಸ್. ಪಾಟೀಲ (ತಿಕೋಟಾ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಡಿಗೆ ನಿಯಂತ್ರಣ ಕಾಯಿದೆಯ ಕೆಲವು ಉಪಬಂಧಗಳನ್ನು ತೆಗೆದು ಹಾಕಿರುವುದರಿಂದ ಕೆಳ ಹಾಗೂ ಮಧ್ಯಮ ವರ್ಗದ ಜನರಿಗೆ ನಗರದಲ್ಲಿ ಬಾಡಿಗೆ ಮನೆ ಪಡೆಯುವಲ್ಲಿ ಆಗುತ್ತಿರುವ ತೊಂದರೆಯ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಸಾಕಷ್ಟು ಬಡತನದಿಂದಲೇ ಬದುಕುತ್ತಿರುವ ಜನರಿಗೆ ಯೋಗ್ಯವಾದ ಬೆಲೆಯಲ್ಲಿ ಬಾಡಿಗೆ ಮನೆ ಸಿಗುವ ಹಾಗೆ ಮತ್ತೆ ಈ ಉಪಬಂಧಗಳನ್ನು ಜಾರಿಗೆ ತರಲು ಸಾಧ್ಯವಿಲ್ಲವೆ?

ಶ್ರೀ ರಮೇಶ್ ಸಿ. ಜಿಗಜಿಣಗಿ ( ಕಂದಾಯ ಸಚಿವರು):

ಅ) ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬ ಕಾರಣಕ್ಕಾಗಿಯೇ ಬಾಡಿಗೆ ನಿಯಂತ್ರಣ ಕಾಯಿದೆಯ ಉಪಬಂಧ 4, 5 ಮತ್ತು 10 ಎ ಗಳನ್ನು ಕೆಲವು ನಗರ ಪ್ರದೇಶಗಳಲ್ಲಿ ಸ್ಥಗಿತಗೊಳಿಸಲಾಗಿದೆ. ಕೇಂದ್ರ ಸರ್ಕಾರವು ರೂಪಿಸಿರುವ ಮಾದರಿ ಬಾಡಿಗೆ ನಿಯಂತ್ರಣ ಕಾಯಿದೆ ಆಧಾರದ ಮೇಲೆ ಹೊಸ ಬಾಡಿಗೆ ನಿಯ್ತುರಣ ಕಾಯಿದೆಯನ್ನು ರಾಜ್ಯದಲ್ಲಿ ಜಾರಿಗೆ ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) 'ಅ' ಗೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ: ಮಾನ್ಯ ಅಧ್ಯಕ್ಷರೆ, ಬಾಡಿಗೆ ನಿಯ್ತುರಣ ಕಾಯಿದೆಯ ಉಪಬಂಧ (4) (5) ಮತ್ತು 10 (ಎ) ಗಳನ್ನು ಕೆಲವು ನಗರ ಪ್ರದೇಶಗಳಲ್ಲಿ ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದ್ದಾರೆ., ಯಾವ ಯಾವ ನಗರ ಪ್ರದೇಶಗಳು ಎಂಬುದನ್ನು ಹೇಳಬೇಕು. ಇನ್ನು ಈ ಬಾಡಿಗೆ ನಿಯ್ತುರಣ ಕಾಯಿದೆಯ ಆಧಾರದ ಮೇಲೆ ಹೊಸ ಬಾಡಿಗೆ ನಿಯ್ತುರಣ ಕಾಯಿದೆಯನ್ನು ರಾಜ್ಯದಲ್ಲಿ ಜಾರಿಗೆ ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಈ ಹೊಸ

ಬಾಡಿಗೆ ನಿಯಂತ್ರಣ ಆಕ್ಟ್ ತಂದ ಮೇಲೆ ಮದ್ಯಮ ಮತ್ತು ಬಡ ವರ್ಗದ ಜನರಿಗೆ ಇದರ ಲಾಭ ಯಾವ ರೀತಿಯಲ್ಲಿ ಸಿಕ್ಕುತ್ತದೆ ಎನ್ನುವ ಬಗ್ಗೆ ತಮ್ಮ ಮೂಲಕ ಸನಾಮಾನ್ಯ ಕಂದಾಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ರಮೇಶ್ ಸಿ. ಜಿಗಜಿಣಗಿ:** ಮಾನ್ಯ ಅಧ್ಯಕ್ಷರೆ, ಈಗ ಇರತಕ್ಕಂಥ ಕಾನೂನಿನಲ್ಲಿ ಬಡವರಿಗೆ ತೊಂದರೆಯಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಈ ರೆಂಟ್ ಕಂಟ್ರೋಲ್ ಆಕ್ಟ್‌ನ್ನು ಸ್ಥಗಿತಗೊಳಿಸಲಾಗಿದೆ. ಕೇಂದ್ರ ಸರ್ಕಾರದವರು ಕೂಡ ನಮ್ಮ ಸರ್ಕಾರಕ್ಕೆ ಕಾಗದವನ್ನು ಬರೆದು ಡೆಲ್ಲಿಯ ರೆಂಟ್ ಕಂಟ್ರೋಲ್‌ನ್ನು ಅಳವಡಿಸಿ, ರೆಂಟ್ ಕಂಟ್ರೋಲ್ ಆಕ್ಟ್‌ನ್ನು ಮಾಡಬೇಕೆಂದು ಹೇಳಿ ಸೂಚನೆಯನ್ನು ನೀಡಿದ್ದಾರೆ. ಸಾಧ್ಯವಾದ ಮಟ್ಟಿಗೆ ಮುಂದಿನ ವಿಧಾನಸಭೆಯಲ್ಲಿ ಒಂದು ಸಮಗ್ರವಾಗಿರತಕ್ಕಂಥ ಬದಲಾವಣೆ ತಂದು ಅಮೆಂಡ್‌ಮೆಂಟ್ ತಂದು ಈ ರೆಂಟ್ ಕಂಟ್ರೋಲ್ ಆಕ್ಟ್‌ನ್ನು ಜಾರಿಗೆ ತರುವುದಕ್ಕೆ ಕ್ರಮವನ್ನು ಹಮ್ಮಿಕೊಂಡಿದ್ದೇವೆ. ಹಿಂದೆ ಇರತಕ್ಕಂಥ ಕಾನೂನಿನಲ್ಲಿ ಬಹಳ ತೊಡಕುಗಳಿವೆ. ಇದರಿಂದ ಬಡವರಿಗೆ ತೊಂದರೆಯಾಗುತ್ತದೆ.

**ಶ್ರೀ ಶಿವಾನಂದ ಎನ್. ಪಾಟೀಲ:** ಮಾನ್ಯ ಅಧ್ಯಕ್ಷರೆ, ಮೊದಲ ಪ್ರಶ್ನೆಗೆ ಉತ್ತರವಾಗಿ ಕೆಲವು ನಗರಪ್ರದೇಶಗಳಲ್ಲಿ ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಅವು ರಾಜ್ಯದಲ್ಲಿರತಕ್ಕಂಥ ಯಾವ ಯಾವ ನಗರಗಳು?

**ಶ್ರೀ ರಮೇಶ್ ಸ. ಜಿಗಜಿಣಗಿ:** ಮಾನ್ಯ ಅಧ್ಯಕ್ಷರೆ, ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

## ರಾಜ್ಯದಲ್ಲಿ ತೋಟಗಾರಿಕಾ ಫಾರಂಗಳು

**115 (962) ಶ್ರೀ ಬಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):** ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ಫಾರಂಗಳಿವೆ? (ಜಿಲ್ಲಾವಾರು) (ಅವುಗಳ ವಿಸ್ತೀರ್ಣವೇನು)?

ಆ) ಈ ಫಾರಂಗಳ ನಿರ್ವಹಣೆಗೆ ಪ್ರತಿ ವರ್ಷ ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ? (ಫಾರಂ ವಾರು)?

ಇ) ಈ ಫಾರಂ ಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು? ಫಾರಂ ವಾರು)

ಈ) ನಷ್ಟ ಅನುಭವಿಸಿದ್ದರೆ ಕಾರಣಗಳೇನು

**ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕ ರಾಜ್ಯ ಸಚಿವರು):**

ಅ) ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟಾರೆ 397 ತೋಟಗಾರಿಕೆ ಕ್ಷೇತ್ರ: ಸಸ್ಯಗಾರಗಳಿವೆ (ಜಿಲ್ಲಾವಾರು ಮಾಹಿತಿ ಹಾಗೂ ವಿಸ್ತೀರ್ಣವನ್ನು ಅನುಬಂಧ-1 ರಲ್ಲಿ ವಿವರಿಸಲಾಗಿದೆ.